ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ

## ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/55/2015-16** 19-5-2016

---

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

---

| ವಾದಿಗಳು | ಪ್ರತಿವಾದಿಗಳು |
|---|---|
| 4) ಶ್ರೀ ಎಂ.ನಾಗಭೂಷಣ<br>ತಂದೆ ಎಂ.ವೀರಣ್ಣ<br>ಎಂ.ಪಿ.ಪ್ರಕಾಶ ನಗರ,<br>ಗ್ರಾಮ : ಹೂವಿನಹಡಗಲಿ | 1) ಶ್ರೀ ಕೆ. ಅಶೋಕ<br>ತಂದೆ ನಾಗೇಂದ್ರಪ್ಪ, ಮೋರಿಗೇರಿ<br>2) ಶ್ರೀಮತಿ ಬಸಮ್ಮ<br>ಗಂಡ ರಾಜು<br>ಗ್ರಾಮ : ದಾವಣಗೆರೆ |

---

ವಿಷಯ : – **ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಮೋರಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 630/ಜಿ ವಿಸ್ತೀರ್ಣ 7-77 ಎಕರೆ ಜಮೀನು ನೊಂದಣಿ ಕ್ರಯ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-03679/2015-16 ದಿನಾಂಕ: 21-01-2016 ರಂತೆ ಕ್ರಯ ವಹಿವಾಟು ನಡೆದಿದ್ದು ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು –ವಿಚಾರಣೆ.**

---

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 630/ಜಿ ವಿಸ್ತೀರ್ಣ 7-77 ಎಕರೆ ಜಮೀನು ಕ್ರಯ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-03679/2015-16 ದಿನಾಂಕ: 21-01-2016 ರಂದು ಹಾಲೀ ಪಹಣಿ ಲೆಕ್ಕ ದಾಖಲು ಶ್ರೀ ಕೊಬ್ಬಜ್ಜಿ ಮಲ್ಲಪ್ಪ ತಂದೆ ನಂದೆಪ್ಪ ಮೋರಗೇರಿಯವರಿಂದ ವಾದಿಗಳು ಕ್ರಯಕ್ಕೆ ಹೊಂದಿರುತ್ತಾರೆ. ಕ್ರಯ ವಹಿವಾಟು ಪ್ರಕಾರ ತಾಲೂಕಾ ಭೂಮಿ ಕೇಂದ್ರದಲ್ಲಿ ವಹಿವಾಟು ಸಂಖ್ಯೆ 158 M.R. ಸಂಖ್ಯೆ ಹೆಚ್-61/2015-16 ರಂತೆ ದಾಖಲಾಗಿ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಭೂಮಿ ಕೇಂದ್ರದಿಂದ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ಮುಂದಿನ ಹಕ್ಕು ಬದಲಾವಣೆ ಕ್ರಮಕ್ಕಗಿ ರವಾನೆಯಾಗಿರುತ್ತದೆ. ಸದರಿ ನೋಟೀಸುಗಳನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಗ್ರಾಮ ಲೆಕ್ಕಾಧಿಕಾರಿ ಮೋರಗೇರಿ ಇವರ ದ್ವಾರ ನೋಟೀಸುಗಳನ್ನು ಜಾರಿ ಮಾಡಿರುತ್ತಾರೆ. ನೋಟೀಸುಗಳನ್ನು ಜಾರಿ ಮಾಡಲಾಗಿ ಸದರಿ ಪ್ರಕರಣಕ್ಕೆ ಪ್ರತಿವಾದಿಗಳು ತಮ್ಮ ಲಿಖಿತ ತಕರಾರನ್ನು ಭೂಮಿಕೇಂದ್ರದಲ್ಲಿನ ಸ್ವೀಕೃತಿ ಸಂಖ್ಯೆ 5594/2015-16 ದಿನಾಂಕ: 28-01-2016

ರಂದು ತಕರಾರು ದಾಖಲಾಗಿರುತ್ತದೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 05-04-2016 ರಿಂದ 19-05-2016 ರವರೆಗೆ ವಿಚಾರಣೆ ನಡೆಸಲಾಯಿತು. ಪ್ರಥಮ ವಾಯಿದ ದಿವಸ ಪ್ರತಿವಾದಿಗಳು ಹಾಜರಾಗಿರುತ್ತಾರೆ. ವಾದಿಯು ಗೈರು ಹಾಜರು ಆಗಿರುತ್ತಾರೆ. ಆನಂತರ ಪ್ರತಿವಾದಿಗಳು ನ್ಯಾಯಾಲಯಕ್ಕೆ ತಮ್ಮ ಲಿಖಿತ ಹೇಳಿಕೆ ಸಲ್ಲಿಸುತ್ತ ತಾವು ಮಾಡಿರುವ ತಕರಾರನ್ನು ನ್ಯಾಯಾಲಯದ ಹೊರಗಡೆ ವಾದಿಯೊಂದಿಗೆ ಪಂಚಾಯತಿ ಮಾಡಿಕೊಂಡಿರುತ್ತೇವೆಂದು ಹಾಗೂ ತಾವು ಮಾಡಿರುವ ತಕರಾರನ್ನು ಹೇಳಿಕೆ ನೀಡುವುದರ ಮೂಲಕ ವಾಪಾಸು ಪಡೆದಿರುತ್ತೇವೆಂದು ಹಕ್ಕು ಬದಲಾವಣೆ ಮಾಡಲು ತಮ್ಮ ಯಾವುದೇ ತಕರಾರು ಇಲ್ಲವೆಂದು ಹೇಳಿಕೆ ಸಲ್ಲಿಸಿರುತ್ತಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ ಹಾಲೀ ಲೆಕ್ಕ ದಾಖಲು ಕೊಬ್ಬಜ್ಜಿ ಮಲ್ಲಪ್ಪ ತಂದೆ ನಂದ್ಯಪ್ಪ ಇವರು ಕ್ರಯಪತ್ರ ಸಂಖ್ಯೆ ಹೆಚ್.ಬಿ.ಹೆಚ್-1-03679/2015-16/ ದಿನಾಂಕ:21/01/2016 ರಂತೆ ನೋಂದಣಿ ಮಾಡಿಸಿಕೊಟ್ಟಿರುವರು. ಕ್ರಯಪತ್ರವು ನೈಜತೆಯಿಂದ ಕೂಡಿರುತ್ತದೆ ಹಾಗೂ ಪ್ರತಿವಾದಿಗಳು ತಮ್ಮ ತಕರಾರನ್ನು ಲಿಖಿತ ಹೇಳಿಕೆ ಮೂಲಕ ಸಲ್ಲಿಸುವುದರ ಮೂಲಕ ಹಿಂಪಡೆದಿರುವುದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 630/ಜಿ ವಿಸ್ತೀರ್ಣ7-77ಎಕರೆ ಜಮೀನನ್ನು ಕ್ರಯ ದಸ್ತಾವೇಜು ಪ್ರಕಾರ ಕ್ರಯದಾರರಾದ ಎಂ.ನಾಗಭೂಷಣ ತಂದೆ ವೀರಣ್ಣ, ಎಂ.ಪಿ.ಪ್ರಕಾಶ ನಗರ, ಹೂವಿನಹಡಗಲಿ ಇವರ ಹೆಸರಿನಲ್ಲಿ ಕ॥ಭೂ॥ಕಂ॥ ಅಧಿನಿಯಮ 1964 ರ ಕಲಂ 128 ಹಾಗೂ 129 ರನ್ವಯ ಹಕ್ಕು ಬದಲಾವಣೆ ಮುಂಜೂರು ಮಾಡಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 19.5.16 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-
1) ವಾದಿ + ಪ್ರತಿವಾದಿಗಳು
2) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ